**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ 10-11-2021</u>**

**ಪಾಟೀ ಸವಾಲು - 5ನೇ ಪ್ರತಿವಾದಿ ಪರ ಶ್ರೀ. ಪಿ.ಬಿ.ಎನ್., ವಕೀಲರಿಂದ**

3) ನಾನು ವಾದಿಗಳ ಜೊತೆ ಚೆನ್ನಾಗಿಯೇ ಇದ್ದೇನೆ. ನನ್ನ ತಂದೆ ಜೊತೆ ಕೂಡ ನನ್ನ ಸಂಬಂಧ ಚೆನ್ನಾಗಿಯೇ ಇರುತ್ತದೆ. ವಾದಿಗಳು ಈ ದಾವೆ ಹಾಕುವ ಸಮಯದಲ್ಲಿ ನಮ್ಮ ಸಂಬಂಧ ಚೆನ್ನಾಗಿಯೇ ಇತ್ತು ಎಂದರೆ ಸರಿ. ನಾನು ಯಾವ ಕಾರಣಕ್ಕೆ ದಾವೆಯಲ್ಲಿ ವಾದಿಗಳ ಜೊತೆ ಸೇರಿ ವಾದಿಯಾಗಲಿಲ್ಲ ಎಂದರೆ ನಾನು ಡಿವೈಡ್ ಆಗಿದ್ದರಿಂದ ವಾದಿಗಳ ಜೊತೆ ದಾವೆ ಹಾಕಲಿಲ್ಲ. ಈ ದಾವೆಯಲ್ಲಿ ಇರುವ ಸ್ವತ್ತುಗಳ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಸ್ವತ್ತನ್ನು ಹೊರತು ಪಡಿಸಿ ಬೇರೆ ಆಸ್ತಿಗಳನ್ನು ನಾವು ಈ ದಾವೆ ಹಾಕಿದ ನಂತರ ಕೋರ್ಟಿನಲ್ಲಿ ವಿಭಾಗ ಮಾಡಿಕೊಂಡಿದ್ದೇವೆ. ದಾವಾ ಐಟಂ ನಂ.1 ವಿಸ್ತೀರ್ಣ 2 ಎಕರೆ 36 ಅಥವಾ 37 ಗುಂಟೆ ಇರಬಹುದು. ಅದರಲ್ಲಿ 35 ಗುಂಟೆ ರಸ್ತೆಗೆ ಹೋಗಿರುತ್ತದೆ. 5ನೇ ಪ್ರತಿವಾದಿ ಉಳಿಕೆ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿ.05-11-2004 ರಂದು 5ನೇ ಪ್ರತಿವಾದಿ ನನ್ನ ತಂದೆಯ ಕಡೆಯಿಂದ ಐಟಂ ನಂ.1 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದ 5ನೇ ಪ್ರತಿವಾದಿಯೇ ಸ್ವಾಧೀನ ಹೊಂದಿದ್ದಾರೆ ಎಂದರೆ ಇಲ್ಲ, ನಾವು ಸ್ವಾಧೀನದಲ್ಲಿದ್ದೇವೆ. ಮಾರಾಟವಾಗಿರುವ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ನಾಲ್ಕು ವರ್ಷ ಗಳ ಹಿಂದೆ ಮೃತ ಪಟ್ಟಿದ್ದಾರೆ. ನನ್ನ ತಂದೆ ಜೀವಂತವಿದ್ದಾಗ 5ನೇ ಪ್ರತಿವಾದಿ ಪರವಾಗಿ

ಆಗಿರುವ ಕ್ರಯಪತ್ರವನ್ನು ಪ್ರಶ್ನಿಸಿರಲಿಲ್ಲ ಎಂದರೆ ಸರಿ. ದಾವಾ ಐಟಂ ನಂ.1 ರ ಪಹಣಿ 5 ನೇ ಪ್ರತಿವಾದಿ ಹೆಸರಿನಲ್ಲೇ ನಮೂದಾಗುತ್ತಿವೆ ಎಂದರೆ ಸರಿಯಲ್ಲ. ಪಹಣಿಗಳು ಈಗಲೂ ನಿಮ್ಮ ತಂದೆಯ ಹೆಸರಿನಲ್ಲಿ ಬರುತ್ತಿರುವ ಬಗ್ಗೆ ಅವುಗಳನ್ನು ಹಾಜರು ಮಾಡಿದ್ದೀರಾ? ಎಂದರೆ ಮಾಡಿದ್ದೇನೆ. ಸ್ವಾಧೀನದಲ್ಲಿ 5 ನೇ ಪ್ರತಿವಾದಿ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ನ್ನು ಮಾರಾಟ ಮಾಡುವ ಕಾಲಕ್ಕೆ ನನ್ನ ತಂದೆಗೆ ಕುಟುಂಬ ಪೋಷಣೆ ಮಾಡುವುದಕ್ಕೆ ಸ್ವಲ್ಪ ತೊಂದರೆ ಇತ್ತು ಎಂದರೆ ಸರಿ. ಆದ್ದರಿಂದ ನನ್ನ ತಂದೆ ಐಟಂ ನಂ.1 ನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದರು ಎಂದರೆ ಇಲ್ಲ, ಅಡಮಾನ ಮಾಡುತ್ತೇನೆ ಎಂದು ಹೇಳಿದ್ದರು. ನನ್ನ ತಂದೆಗೆ ಯಾವುದೇ ವಿಧವಾದ ದುಶ್ಚಟಗಳು ಇರಲಿಲ್ಲ ಎಂದರೆ ಸರಿ. ಮಾರಾಟದಿಂದ ಬಂದ ಹಣವನ್ನು ನನ್ನ ತಂದೆ ಕುಟುಂಬಕ್ಕಾಗಿಯೇ ಖರ್ಚು ಮಾಡಿದ್ದಾರೆ ಎಂದರೆ ಸ್ವಲ್ಪ ಹಣ ಕುಟುಂಬಕ್ಕಾಗಿ ಖರ್ಚು ಮಾಡಿ ಉಳಿದಿದ್ದನ್ನು ಸಾಲ ತೀರಿಸಲು ಬಳಸಿದ್ದಾರೆ. ನನಗೆ ಕನ್ನಡ ಓದಲು ಬರುತ್ತದೆ. 5 ನೇ ಪ್ರತಿವಾದಿ ಐಟಂ ನಂ.1 ನ್ನು ಖರೀದಿ ಮಾಡುವ ಮುಂಚೆ ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.1 ನ್ನು 5 ನೇ ಪ್ರತಿವಾದಿ ಪರವಾಗಿ ಮಾರಾಟ ಮಾಡಿರುವುದು ಗೊತ್ತಿದ್ದರಿಂದಲೇ ನಾವುಗಳು ದಿ.19-12-2013 ರಂದು ಉಳಿದ ಆಸ್ತಿಗಳ ಬಗ್ಗೆ ಪಾಲು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ದಾವೆ ಇದೆ ಎಂದು ಈ ಆಸ್ತಿಯನ್ನು ವಿಭಾಗ ಮಾಡಿಕೊಳ್ಳಲಿಲ್ಲ. 4 ನೇ ಪ್ರತಿವಾದಿ ವಿರುದ್ಧ ನಾವು ಕಾನೂನಿನ ಕ್ರಮ

ತೆಗೆದುಕೊಂಡಿದ್ದೇವೆ. ನನ್ನ ತಂದೆ ಬದುಕಿದ್ದಾಗ ನನ್ನ ಜೊತೆ ವಾಸ ಮಾಡುತ್ತಿದ್ದರು ಎಂದರೆ ಸರಿ. ಈಗ ಐಟಂ ನಂ.1 ರಲ್ಲಿ ಮಾಲೀಕರಾಗಿ 5 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ನಾವೇ ಸ್ವಾಧಿನದಲ್ಲಿದ್ದೇವೆ. 4 ನೇ ಪ್ರತಿವಾದಿ ವಿರುದ್ದ ಸುಳ್ಳು ಆರೋಪ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ವೆಂಕಟರಾಮಯ್ಯ ಜಮೀನು, ಪಶ್ಚಿಮಕ್ಕೆ ಹಿಂದೆ ಜಮೀನು ಇದ್ದು ಈಗ ರಸ್ತೆ ಇದೆ. ಉತ್ತರಕ್ಕೆ ಕಾಲುವೆ ಮತ್ತು ದಕ್ಷಿಣಕ್ಕೆ ಬಾಲದಿಮ್ಮನಹಳ್ಳಿ ಗ್ರಾಮ ಮತ್ತು ರಸ್ತೆ ಇರುತ್ತವೆ. ನಾನು ಐಟಂ ನಂ.1 ಕ್ಕೆ ಸುಳ್ಳು ಚೆಕ್ಕುಬಂದಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸ್ವಾಧೀನ ಇರುವ ಬಗ್ಗೆ ದಾಖಲೆ ಹಾಜರು ಮಾಡಿದ್ದೀವಾ? ಎಂದರೆ ಮಾಡಿದ್ದೇವೆ. ನಾನು ಹಾಜರು ಮಾಡದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ಜೊತೆ ಶಾಮೀಲಾಗಿ 5 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.